# ಸುದ್ದಿ ಸಂಚಯ

## ರಾಮಕೃಷ್ಣ ಮಿಷನ್ನಿನಿಂದ ಒರಿಸ್ಸಾದಲ್ಲಿ ಪರಿಹಾರ ಕಾರ್ಯ

### ಪುನರ್ವಸತಿ ಯೋಜನೆಯ ವರದಿ

**ಒರಿಸ್ಸಾದಲ್ಲಿ** ಹೋದ ವರ್ಷ ಅಕ್ಟೋಬರ್ ೨೯ರಂದು ಸಂಭವಿಸಿದ ಭೀಕರ ಚಂಡಮಾರುತದ ಪರಿಣಾಮವಾಗಿ ವಿಧ್ವಂಸಗೊಂಡ ಹಳ್ಳಿಗಳಲ್ಲಿ ರಾಮಕೃಷ್ಣ ಮಿಷನ್ ಶೀಘ್ರವೇ ಪರಿಹಾರ ಕಾರ್ಯವನ್ನು ಪ್ರಾರಂಭಿಸಿತು.೧೦,೦೦೦ಕ್ಕೂ ಹೆಚ್ಚು ಸಂತ್ರಸ್ತ ಕುಟುಂಬಗಳಿಗೆ ಪ್ರಾಥಮಿಕ ಪರಿಹಾರದ ರೂಪದಲ್ಲಿ ಆಹಾರದ ದಿನಸಿಗಳು, ವಸ್ತ್ರಗಳು, ಹೊದೆಯುವ ಕಂಬಳಿಗಳು ಮುಂತಾದ ದಿನ ನಿತ್ಯ ಬಳಕೆಯ ವಸ್ತುಗಳನ್ನು ಒದಗಿಸಲಾಯಿತು. ಸಂಚಾರ ವೈದ್ಯಕೀಯ ಘಟಕದ ನುರಿತ ವೈದ್ಯರುಗಳ ಮತ್ತು ಸಹಾಯಕರ ನೆರವಿನಿಂದ ಔಷಧಿ ವಿತರಣೆ ಕಾರ್ಯವನ್ನು ನಡೆಸಲಾಯಿತು.

ಪರಿಹಾರದ ದ್ವಿತೀಯ ಹಂತದ ಕಾರ್ಯಕ್ರಮದಲ್ಲಿ ಬೃಹತ್ ಪ್ರಮಾಣದ ಪುನರ್ವಸತಿಯ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಸದ್ಯದ ಯೋಜನೆಯ ಪ್ರಕಾರ, ಜಗತ್‌ಸಿಂಗ್‌ಪುರ ಜಿಲ್ಲೆಯ ಎರ್ಸಮ ಬ್ಲಾಕ್‌ನಲ್ಲಿ ಕುಂಜಕೋಠಿ ಗ್ರಾಮ ಪಂಚಾಯತಿಯಡಿ ಬರುವ ಕನಗುಲಿ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ರೂಪಿಸಲಾಗುತ್ತದೆ. ಆ ಗ್ರಾಮದ ಸಾಮಾಜಿಕ-ಆರ್ಥಿಕ ಸಮೀಕ್ಷೆಗಾಗಿ ರಾಮಕೃಷ್ಣ ಮಿಷನ್ನಿನ ಪಶ್ಚಿಮ ಬಂಗಾಲದ ನರೇಂದ್ರಪುರ ಶಾಖೆಯ ತಜ್ಞರ ತಂಡ ಅಲ್ಲಿ ತೆರಳಿದ್ದು ಸಮೀಕ್ಷೆಯನ್ನು ಮುಂದುವರಿಸುತ್ತಿದೆ. ಆ ಗ್ರಾಮದಲ್ಲಿ ಮಾದರಿ ಮನೆಯ ನಿರ್ಮಾಣ ಭರದಿಂದ ಸಾಗುತ್ತಿದೆ.

ಪ್ರಾಥಮಿಕ ವರದಿಯ ಪ್ರಕಾರ ಚಂಡಮಾರುತವನ್ನೂ ಎದುರಿಸಿ ನಿಲ್ಲಬಲ್ಲ ಆರ್.ಬಿ.ಛಾವಣಿಯ ಮತ್ತು ೨೫೦ ಚ.ಅಡಿ ಪ್ಲಿಂಥ್ ವಿಸ್ತೀರ್ಣದ ೩.೨೭ ಪಕ್ಕಾ ಮನೆಗಳನ್ನು ನಿರ್ಮಿಸಬೇಕಾಗಿದೆ. ಈ ಮನೆಗಳಿಗೆ ಹೊಂದಿಕೊಂಡಿರುವಂತೆ ಶೌಚಾಲಯಗಳನ್ನು ಕಟ್ಟಲಾಗುವುದು. ಪುರೀ ಜಿಲ್ಲೆಯ ಚಿತ್ತೇಶ್ವರೀ ಗ್ರಾಮಪಂಚಾಯತಿಯಡಿ ಬರುವ ಕೋಟಂಗ್ ಗ್ರಾಮದಲ್ಲಿ ಈಗಾಗಲೇ ಈ ಕಟ್ಟಡಗಳಿಗೆ ಮಾರ್ಚ್ ೧೮ರಂದು ಅಡಿಪಾಯವನ್ನು ಹಾಕಲಾಗಿದೆ.

ಮೇಲಾಗಿ, ಶಾಲಾ ಕಟ್ಟಡಗಳನ್ನು, ಹ್ಯಾಂಡ್ ಪಂಪ್ ಮತ್ತು ಕೊಳವೆ ಬಾವಿಗಳನ್ನು, ಹಾಗೂ ಆರ್ಥಿಕ ನೆರವನ್ನು ಒದಗಿಸುವುದು ಈ ಯೋಜನೆಯ ಪ್ರಧಾನ ಅಂಶಗಳಾಗಿವೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸುಮಾರು ೩೩೬ ಲಕ್ಷ ರೂ ವೆಚ್ಚ ತಗಲುವುದೆಂದು ಅಂದಾಜು ಮಾಡಲಾಗಿದೆ.

ಸಂಪೂರ್ಣ ಪುನರ್ವಸತಿ ಯೋಜನೆಯನ್ನು ಏಪ್ರಿಲ್ ೨೦೦೦ದಿಂದ ಮೊದಲ್ಗೊಂಡು ೧೮ ತಿಂಗಳ ಒಳಗೆ ಕಾರ್ಯಗತಗೊಳಿಸುವ ಪ್ರಯತ್ನ ಮುಂದುವರಿದಿದೆ. ◆

## ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಶಿಲಾನ್ಯಾಸ

**ಸ್ವಾಮಿ** ವಿವೇಕಾನಂದ ಯೂತ್ ಮೂವ್‌ಮೆಂಟ್ ಎಂಬ ಸ್ವಯಂಸೇವಾ ಸಂಸ್ಥೆಯು ಹೆಗ್ಗಡದೇವನ ಕೋಟೆ ತಾಲೂಕಿನಲ್ಲಿನ ಜನತೆಯ ಸೇವೆಯಲ್ಲಿ ಸುಮಾರು ಒಂದೂವರೆ ದಶಕಗಳಿಗೂ ಮೇಲ್ಪಟ್ಟು ಕ್ರಿಯಾಶೀಲವಾಗಿದೆ. ಅಲ್ಲಿನ ಜನತೆಗೆ, ವಿಶೇಷವಾಗಿ ಆದಿವಾಸಿಗಳಿಗೆ ಶಿಕ್ಷಣ, ಸ್ವಾಸ್ಥ್ಯ ಹಾಗೂ ಗ್ರಾಮೋನ್ನತಿಯ ಕಾರ್ಯಕ್ರಮಗಳಲ್ಲಿ ಯಶಸ್ವಿಯಾಗಿ ಸೇವೆ ಸಲ್ಲಿಸುತ್ತಿದ್ದು ಅಲ್ಲಿನ ಜನತೆಯ ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ಈ ಸೇವಾಸಂಸ್ಥೆ ಮಹತ್ತ್ವದ ಪಾತ್ರವನ್ನು ವಹಿಸಿದೆ.

ಅದೇ ತಾಲ್ಲೂಕಿನ ಸರಗೂರಿನಲ್ಲಿ ಸುಮಾರು ಮೂರು ವರ್ಷಗಳಿಂದ ಒಂದು ಸ್ವಾಸ್ಥ್ಯಕೇಂದ್ರವನ್ನು ನಡೆಸುತ್ತಿದ್ದು, ಇದನ್ನು ಸಂಪೂರ್ಣವಾಗಿ ಸುಸಜ್ಜಿತವಾದ ಆಸ್ಪತ್ರೆಯನ್ನಾಗಿ ಬೆಳೆಸುವ ಬೃಹತ್ ಯೋಜನೆಯನ್ನು ಹಮ್ಮಿಕೊಂಡಿದೆ.

೧೦೦ ಹಾಸಿಗೆಗಳ ಈ ಆಧುನಿಕ ಆಸ್ಪತ್ರೆಯ ಶಿಲಾನ್ಯಾಸವನ್ನು ಮೈಸೂರಿನ ಶ್ರೀರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜೀ ಅವರು ಏಪ್ರಿಲ್ ೩ರಂದು ನೆರವೇರಿಸಿದರು. ಸಿಬ್ಬಂದಿ ವಸತಿಗೃಹಗಳ ಶಿಲಾನ್ಯಾಸವನ್ನು, ಸ್ವಾಮಿ ಸುರೇಶಾನಂದಜೀಯವರು ಹಾಗೂ ಫಲಕದ ಅನಾವರಣವನ್ನು ಸುತ್ತೂರು ಮಠಾಧ್ಯಕ್ಷರಾದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಜೀಯವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ಸರ್ಕಾರದ ಹಣಕಾಸು ರಾಜ್ಯ ಸಚಿವರಾದ ಶ್ರೀ ಎಂ. ಶಿವಣ್ಣನವರು ವಹಿಸಿದ್ದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸುತ್ತೂರು ಮಠದ ಸ್ವಾಮೀಜಿಯವರು ಮೈಸೂರಿನ ಆಶ್ರಮದ ಮಾರ್ಗದರ್ಶನದಲ್ಲಿ ಉತ್ಕೃಷ್ಟವಾದ ಸೇವೆಗೈಯುತ್ತಿರುವ ಈ ಸಂಸ್ಥೆಯ ಸೇವಾಭಾವದ ವೈದ್ಯಕೀಯವೃಂದಕ್ಕೆ ಎಲ್ಲರೂ ನೆರವು ನೀಡಬೇಕೆಂದು ಕೋರಿದರು.

ಈ ತಾಲ್ಲೂಕಿನಲ್ಲಿ ಮೊಟ್ಟಮೊದಲಬಾರಿಗೆ ಎರಡುಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಆಸ್ಪತ್ರೆಯ ಕಟ್ಟಡ ಕಾರ್ಯದ ಮೊದಲನೆಯ ಹಂತಕ್ಕೆ ತಮ್ಮ ವೈಯಕ್ತಿಕ ದಾನವನ್ನು ಘೋಷಿಸುತ್ತ, ಎಲ್ಲರ ಸಹಕಾರದಿಂದ ಆಸ್ಪತ್ರೆ ಬೇಗ ಪ್ರಾರಂಭವಾಗಲಿ ಎಂದು ಹಾರೈಸಿದರು. ◆